CC 804/2025
ಪಿ-ಡಬ್ಲ್ಯೂ- 01

ದಿನಾಂಕಃ 25-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ

ನಾನು ನಿಪಿ-12 ನ್ನು ಬ್ಯಾಂಕ್ ನಲ್ಲಿ ಇರುವ ಕಂಪ್ಯೂಟರ್ ನಿಂದ ತೆಗೆದುಕೊಂಡು ಹಾಜರುಪಡಿಸಿರುತ್ತೇವೆ . ನಿಪಿ 12 ನ್ನು ಯಾವ folder ನಲ್ಲಿ ಇಟ್ಟಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾವು ಸಿಸ್ಟಂ ನಿಂದಲೇ ತೆಗೆದು ಹಾಜರುಪಡಿಸಿದ್ದೇವೆ ಅದನ್ನು ಯಾವುದೇ ಮಾಧ್ಯಮ ಅಥವಾ folder ನಲ್ಲಿ ಇಟ್ಟಿಲ್ಲ . ಕಂಪ್ಯೂಟರ್ ನಲ್ಲಿ ಯಾವುದೇ ದಾಖಲೆಯನ್ನು ಇಡಬೇಕಾದರೆ folder, files and drive ನಲ್ಲಿ ಇಡಬೇಕಾಗುತ್ತದೆ ಎಂದರೆ ಸರಿಯಲ್ಲ . ನಾನು ಹೇಳುವ ರೀತಿ ಸದ್ರಿ ದಾಖಲೆಯನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಪಿ 12 ರಲ್ಲಿ 2 windows ಗಳನ್ನು ತೋರಿಸುತ್ತಿದೆ ಎಂದರೆ ಸರಿ . Windows ಗಳನ್ನು ಕೂಡ file ನಲ್ಲಿ ಇಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕ್ ನಲ್ಲಿ ನಮ್ಮದೇ ಆದ Server system ಇರುತ್ತದೆ. ನಮ್ಮ SBI Bank ನವರು ಉಪಯೋಗಿಸುವ Server ಆಗಿರುತ್ತದೆ. ನಾನು ಹಾಜರುಪಡಿಸಿರುವ ಸಂಪೂರ್ಣ ನಿಪಿ 12 ದಾಖಲೆ ಸದ್ರಿ server ನಲ್ಲಿ ಇರುತ್ತದೆ . ನಾನು ಹೇಳುವ ರೀತಿ ನಿಪಿ 12 ರಲ್ಲಿ Server ನ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ನಾವು software ನಲ್ಲಿ ಏನು ಬರುತ್ತದೆ ಅದನ್ನು ತಂದು ಹಾಜರುಪಡಿಸಿದ್ದೇವೆ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ತಿಳಿಸಿರುತಾರೆ . ಸದ್ರಿ ಕಂಪ್ಯೂಟರ್ ಗೆ ನಮ್ಮಎಲ್ಲಾ ಸಿಬ್ಬಂದಿಗಳಿಗೆ access ಇರುತ್ತದೆ . ನಾನು ಉಪಯೊೀಗಿಸಿದಾಗ ನನಗೆ ಒಂದು password ಬೇರೆಯವರು ಉಪಯೋಗಿಸಿದಾಗ ಅವರಿಗೆ ಬೇರೆ password ಇರುತ್ತದೆ . ನಾನು ನನ್ನ ಐಡಿಯಿಂದ ನಿಪಿ 12 ನ್ನು ತೆಗೆದಿರುತ್ತೇನೆ. ಎಲ್ಲರೂ ಕಂಪ್ಯೂಟರ್ ಗೆ access ಆಗಬಹುದಾಗಿದ್ದರಿಂದ ನಿಪಿ 12 ರಲ್ಲಿ ಇರುವ ಅಂಕಿ ಅಂಶಗಳನ್ನು ಯಾರು ಬೇಕಾದರೂ ಬದಲಾಯಿಸಬಹುದು ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ನಿಪಿ12 ನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಿಪಿ 12 ಸಾಲಕ್ಕೆ ಸಂಬಂಧಪಟ್ಟ ದಾಖಲೆ . ನಿಪಿ 12 ಏನು ದಾಖಲೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಾಲದ ದಾಖಲೆ ಎಂದು ತಿಳಿಸಿರುತ್ತಾರೆ . ನಿಪಿ 12 ರಲ್ಲಿ ಚೆಕ್ ನಲ್ಲಿ ನಮೂದು ಆಗಿರುವ 2,72,275/- ದಿ 01-10-2024 ರಂದು ಬಾಕಿ ಇದೆ ಎಂದು ಎಲ್ಲಿಯೂ ಕೂಡ ಕಾಣಿಸುತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಬಡ್ಡಿ ಸೇರಿಸಿ system ಯೇ

ತೆಗೆದುಕೊಳ್ಳುತಿರುತ್ತದೆ ಎಂದು ತಿಳಿಸಿರುತ್ತಾರೆ . ಚೆಕ್ ದಿನಾಂಕದಂದು ಎಷ್ಟು ಬಾಕಿ ಇತ್ತು ಎಂದು ನಿಪಿ 12 ರಲ್ಲಿ ಕಾಣಿಸುತಿಲ್ಲ ಎಂದರೆ ಸಾಕ್ಷಿ ಕಳೆದ ಬಾರಿ ಪಾಟೀ ಸವಾಲಿನಲ್ಲಿ ಅದನ್ನು ಕೇಳದೇ ಇದ್ದುದರಿಂದ ನಾನು ಹಾಜರುಪಡಿಸಿಲ್ಲ. ನಾವು ಹಳೆಯ ದಿನಾಂಕದ printout ನ್ನು ಹಾಜರುಪಡಿಸಲು ಸಾಧ್ಯವಿಲ್ಲ. ಚೆಕ್ ದಿನಾಂಕದಂದು ಎಷ್ಟು ಹಣ ಬಾಕಿ ಇತ್ತು ಎನ್ನುವ ಬಗ್ಗೆ statement ನ್ನು ಹಾಜರುಪಡಿಸಲು ಸಾಧ್ಯವಿಲ್ಲ, ಕಾರಣ ಹಿಂದಿನ ದಿನಾಂಕಗಳ ಸ್ಟೇಟ್ ಮೆಂಟ್ ಹಾಜರುಪಡಿಸಲು ಸಾಧ್ಯವಿಲ್ಲ . ನಾನು ಉದ್ದೇಶಪೂರ್ವಕವಾಗಿ ಸತ್ಯವನ್ನು ಮರೆ ಮಾಚಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ನಿಪಿ 12 ಎ ನ್ನು ನಾನೇ ತಯಾರಿಸಿರುತ್ತೇನೆ . ಅದರಲ್ಲಿ ಹೇಳಿರುವ ವಿಚಾರ ಸ್ವಲ್ಪ ಸ್ವಲ್ಪ ನೆನಪು ಇರುತ್ತದೆ. ನಿಪಿ 12 ಎ ನ್ನು ಕೂಡ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ಆರೋಪಿ ಚೆಕ್ ನಲ್ಲಿ ಕಾಣಿಸಿರುವ ದಿನಾಂಕದಂದು ಚೆಕ್ ನಲ್ಲಿ ಕಾಣಿಸಿರುವ ಹಣವನ್ನು ಕೊಡಲು ಬಾಕಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 12 ನ್ನು ನೇರವಾಗಿ printout ತೆಗೆದಿರುತ್ತೇವೆ . ನಿಪಿ 12 ನ್ನು ಯಾವ printer ನಲ್ಲಿ print ತೆಗೆದಿದ್ದೇನೆ ಎನ್ನುವ ಬಗ್ಗೆ ನನಗೆ ನೆನಪಿಲ್ಲ . ನಿಪಿ 12 ರಲ್ಲಿ 2 windows ಗಳು ಕಾಣಿಸಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1 window ಮೊದಲೇ ತೆರೆದಿತ್ತು ನಾವು ಮತ್ತೊಂದನ್ನು ನಾವು ತೆರೆದಾಗ ಅದು ಪ್ರಿಂಟ್ ಆಗಿರುತ್ತದೆ.ನನಗೆ ಕಂಪ್ಯೂಟರ್ ಬಗ್ಗೆ ಸಂಪೂರ್ಣ ಮಾಹಿತಿ ಇದೆ , ನಾನು ಉದ್ದೇಶಪೂರ್ವಕವಾಗಿ 2 window ಗಳನ್ನು ಒಂದರಲ್ಲಿಯೇ ಪ್ರಿಂಟ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೂಲ ಖಾತೆಯ ಮಾಹಿತಿ ಮೊದಲನೇ window ದಲ್ಲಿ ಇದ್ದುದರಿಂದ 2 ನೇ window ತೆರೆದು ತಿದ್ದುಪಡಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಮೂಲ ಸ್ಟೇಟ್ ಮೆಂಟ್ ನಿಪಿ-8 ಗೂ ಈಗ ಹಾಜರುಪಡಿಸಿರುವ ನಿಪಿ 12 ಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.